**ದಿನಾಂಕ : 22.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ಎಂ.ಟಿ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ, ದಾಖಲಾತಿಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

ಡಿಸ್ ಚಾರ್ಜ್ ಸಮ್ಮರಿಯ self attested ಪ್ರತಿಯನ್ನು ನಿಪಿ 25 ಎಂದು, ಹೊರರೋಗಿ ಚೀಟಿಯನ್ನು ನಿಪಿ 26 ಎಂದು, 4 ಎಕ್ಸ್ ರೇಗಳನ್ನು ಒಟ್ಟಾಗಿ ನಿಪಿ 27 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಬಿ.ಎಸ್.ಎಲ್. ವಕೀಲರಿಂದ**

ವೆಲ್ಲೂರು ಆಸ್ಪತ್ರೆಯ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ವೆಲ್ಲೂರು ಆಸ್ಪತ್ರೆಯಿಂದ ಹಾಸನದ ಆಸ್ಪತ್ರೆಗೆ ರೆಫರೆನ್ಸ್ ಆಗಿರುವುದಿಲ್ಲ ಎಂದರೆ ಹೌದು. ವೆಲ್ಲೂರು ಆಸ್ಪತ್ರೆಯಲ್ಲಿ ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ಮಾಡಿ ಇಂಪ್ಲಾಂಟ್ ಮಾಡಿರುತ್ತಾರೆ ಎಂದರೆ ಹೌದು. ನಾನು ಕೇವಲ ಗಾಯಾಳುವಿಗೆ ಮುಂದುವರೆದ ಚಿಕಿತ್ಸೆ ನೀಡಿದ್ದು, ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಮಾಡಿಲ್ಲ ಎಂದರೆ ಸಾಕ್ಷಿ ಮುಂದುವರೆದ ಚಿಕಿತ್ಸೆ ನೀಡಿ ಇಂಪ್ಲಾಂಟ್ ಗಳನ್ನು ರಿಮೂವ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಗಾಯಾಳುವಿಗೆ ಫಿಸಿಯೋ ಥೆರಪಿ ಚಿಕಿತೆಗೆ ಶಿಫಾರಸ್ಸು ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು, ಮುಂದುವರೆದ ಚಿಕಿತ್ಸೆಗೆ ಬಂದಾಗ ಶಿಫಾರಸ್ಸು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ದಿಃ 15.11.2025 ರಂದು ನಾನು ಗಾಯಾಳುವಿನ ಎಕ್ಸ್ ರೇ ಮಾಡಿಸಿರುತ್ತೇನೆ. ದಿಃ 15.11.2025 ರಂದು ತೆಗೆಸಿದ ಎಕ್ಸ ರೇ ಗಳನ್ನು ನೋಡಿದಾಗ ವೆಲ್ಲೂರು ಆಸ್ಪತ್ರೆಯವರು ಮಾಡಿದ ಚಿಕಿತ್ಸೆಯು ಫಲಕಾರಿಯಾಗಿರುವುದು ಕಂಡು ಬಂದಿರುತ್ತದೆ ಎಂದರೆ ಸಾಕ್ಷಿ ಪೂರ್ತಿಯಾಗಿ ಸಕ್ಸಸ್ ಆಗಿಲ್ಲ, ಕೆಲವು ಕಡೆ ವಕ್ರವಾಗಿದ್ದು ಜಾಯಿಂಟ್ ಗಳು ಸವೆದಿರುತ್ತವೆ ಎಂದು ನುಡಿಯುತ್ತಾರೆ. ನಮ್ಮ ಹಿಮ್ಸ್ ಆಸ್ಪತ್ರೆಯಿಲ್ಲಿ ಅಂಗ ನ್ಯೂನ್ಯತೆಯನ್ನು ನಿರ್ಧಾರ ಮಾಡುವ ಕಮಿಟಿ ಇದೆ ಎಂದರೆ ಹೌದು. ಯಾವುದೇ ಒಬ್ಬ ಗಾಯಾಳುವಿನ ಅಂಗನ್ಯೂನ್ಯತೆಯನ್ನು ಅಸೆಸ್ ಮಾಡುವಾಗ ಒಂದು ವೇಳೆ ಆತನ ಅಂಗ ನ್ಯೂನ್ಯತೆ ಶೇಕಡ 30 ಕ್ಕಿಂತ ಜಾಸ್ತಿ ಬಂದರೆ ಅಂತವರನ್ನು ಕಮಿಟಿಗೆ ರೆಫರ್ ಮಾಡಿ, ಅವರಿಂದ ವರದಿ ಪಡೆಯಬೇಕು ಎನ್ನುವ ನಿಯಮವಿದೆ ಎಂದರೆ ಸಾಕ್ಷಿ ಆ ರೀತಿಯಾದ ಯಾವುದೇ ನಿಯಮವಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಡಿರುವ ಅಂಗನ್ಯೂನ್ಯತೆಯ ಲೆಕ್ಕಾಚಾರವು ಕೇಂದ್ರ ಸರ್ಕಾರ ಹೊರಡಿಸಿದ ಗೈಡ್ ಲೈನ್ಸ್ ಗೆ ವಿರುದ್ದವಾಗಿದೆ ಎಂದರೆ ಸರಿಯಲ್ಲ. ಯಾವುದೇ ಒಂದು ಅಂಗಕ್ಕೆ ಅಂಗನ್ಯೂನ್ಯತೆಯನ್ನು ಹೇಳಿದಾಗ ಒಟ್ಟಾರೆ ದೇಹಕ್ಕೆ ಹೋಲಿಸಿದರೆ ಅಂಗನ್ನೂನ್ಯತೆಯ ಪ್ರಮಾಣ ವ್ಯತ್ಯಾಸವಾಗುತ್ತದಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಗಾಯಾಳುವಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡದೇ ಇರುವುದರಿಂದ ಆತನಿಗೆ ಅಂಗ ನ್ಯೂನ್ಯತೆ ಹೇಳಲು ಸೂಕ್ತ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಉತ್ಪ್ರೇಕ್ಷೆಯಿಂದ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.